# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1186
ಸದಸ್ಯರ ಹೆಸರು : ಶ್ರೀ ಐವನ್ ಡಿಸೋಜಾ
ಉತ್ತರಿಸುವ ಸಚಿವರು : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.
ಉತ್ತರಿಸಬೇಕಾಗಿದ್ದ ದಿನಾಂಕ : 26.02.2018

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅಪೌಷ್ಟಿಕತೆಯಿಂದ ನರಳುತ್ತಿರುವ ಮಕ್ಕಳ ಸಂಖ್ಯೆ ಎಷ್ಟು; ಈ ಬಗ್ಗೆ ಇಲಾಖೆ ಕೈಗೊಂಡಿರುವ ಕ್ರಮವೇನು; | ರಾಜ್ಯದಲ್ಲಿರುವ ತೀವ್ರ ಅಪೌಷ್ಟಿಕ ಮಕ್ಕಳ ಸಂಖ್ಯೆ : 17123<br>ಸಾಧಾರಣ ಅಪೌಷ್ಟಿಕ ಮಕ್ಕಳ ಸಂಖ್ಯೆ : 756229<br>ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.<br>ಇಲಾಖೆಯು ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿವರವನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ. |
| ಆ) | ಅಪೌಷ್ಟಿಕತೆಯನ್ನು ಹೋಗಲಾಡಿಸಲು ಇಲಾಖೆ ಕೈಗೊಂಡ ಕ್ರಮವೇನು; ಮಕ್ಕಳಿಗೆ ಮಾಹಿತಿಯನ್ನು ನೀಡಲು ಇಲಾಖೆಯ ಮುಂದೆ ಇರುವ ಕ್ರಮವೇನು; | ಅಪೌಷ್ಟಿಕತೆಯನ್ನು ಹೋಗಲಾಡಿಸಲು ಸರ್ಕಾರವು ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು ಈ ಯೋಜನೆಗಳ ವಿವರವನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ. |
| ಇ) | ಮಾತೃಪೂರ್ಣ ಯೋಜನೆಯು ಕರಾವಳಿ ಜಿಲ್ಲೆಗಳಲ್ಲಿ ಯಶಸ್ವಿಯಾಗದೆ ಇರಲು ಕಾರಣವೇನು; ಈ ಬಗ್ಗೆ ಇಲಾಖೆಯ ಮುಂದಿರುವ ಕ್ರಮಗಳೇನು? (ವಿವರ ಒದಗಿಸುವುದು) | ಕರಾವಳಿ ಜಿಲ್ಲೆಗಳು ಗುಡ್ಡಗಾಡು, ದಟ್ಟವಾದ ಕಾಡು ಮತ್ತು ಹಳ್ಳಕೊಳ್ಳಗಳಿಂದ ಕೂಡಿರುವುದರಿಂದ ಮತ್ತು ಅಂಗನವಾಡಿಯಿಂದ ಫಲಾನುಭವಿಗಳ ಮನೆಗಳು ಬಹಳ ದೂರದಲ್ಲಿರುವುದರಿಂದ ಫಲಾನುಭವಿಗಳು ಅಂಗನವಾಡಿ ಕೇಂದ್ರಗಳಿಗೆ ಬಂದು ಬಿಸಿಯೂಟ ಸೇವಿಸಲು ಕಷ್ಟ ಸಾಧ್ಯ.<br>**ಇಲಾಖೆಯು ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳು ಈ ಕೆಳಕಂಡಂತಿದೆ:**<br>• ಮಾತೃಪೂರ್ಣ ಯೋಜನೆಯ ಫಲಾನುಭವಿಗಳ ಮನೆಗಳಿಗೆ ಮೇಲ್ವಿಚಾರಕಿಯರು, ಅಂಗನವಾಡಿ ಕಾರ್ಯಕರ್ತೆಯರು ಭೇಟಿ ನೀಡಿ ಮಧ್ಯಾಹ್ನದ ಬಿಸಿಯೂಟಕ್ಕೆ ಬರಲು ಮನವೊಲಿಸಲಾಗುತ್ತಿದೆ.<br>• ಪ್ರಾಯೋಗಿಕವಾಗಿ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವಾರ ತಾಲ್ಲೂಕಿನ 50 ಅಂಗನವಾಡಿ ಕೇಂದ್ರಗಳ 281 ಗರ್ಭಿಣಿ ಬಾಣಂತಿಯರಿಗೆ ಸ್ವಯಂ ಸೇವಾಸಂಸ್ಥೆಗಳ ಸಹಾಯದಿಂದ ಅಂಗನವಾಡಿ ಕೇಂದ್ರಗಳ ಮೂಲಕ ಬಿಸಿಯೂಟವನ್ನು ಮನೆಗೆ ವಿತರಿಸಲಾಗುತ್ತಿದೆ. |

ಸಂ:ಮಮಇ 105 ಐಸಿಡಿ 2018

(ಡಾ. ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

## ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1186ಕ್ಕೆ ಅನುಬಂಧ–1

| ಕ್ರಮಸಂಖ್ಯೆ | ಜಿಲ್ಲೆಯ ಹೆಸರು | ಮಕ್ಕಳ ಪೌಷ್ಠಿಕತಾ ಮಟ್ಟ | | | |
|---|---|---|---|---|---|
| | | ಸಾಧಾರಣ ಅಪೌಷ್ಠಿಕ ಮಕ್ಕಳ ಸಂಖ್ಯೆ | | ತೀವ್ರ ಅಪೌಷ್ಠಿಕ ಮಕ್ಕಳ ಸಂಖ್ಯೆ | |
| | | | % | | % |
| 1 | ಬಾಗಲಕೋಟೆ | 33852 | 21.06 | 519 | 0.32 |
| 2 | ಬೆಂಗಳೂರು ನಗರ | 15188 | 8.59 | 268 | 0.15 |
| 3 | ಬೆಂಗಳೂರು | 6135 | 10.64 | 131 | 0.23 |
| 4 | ಬೆಳಗಾಂ | 85755 | 19.71 | 1828 | 0.42 |
| 5 | ಬಳ್ಳಾರಿ | 56865 | 26.29 | 618 | 0.29 |
| 6 | ಬೀದರ್ | 41395 | 30.00 | 439 | 0.32 |
| 7 | ಬಿಜಾಪುರ | 67531 | 28.23 | 1019 | 0.43 |
| 8 | ಚಾಮರಾಜನಗರ | 9295 | 15.07 | 141 | 0.23 |
| 9 | ಚಿಕ್ಕಬಳ್ಳಾಪುರ | 9121 | 11.04 | 272 | 0.33 |
| 10 | ಚಿಕ್ಕಮಗಳೂರು | 6606 | 11.81 | 193 | 0.35 |
| 11 | ಚಿತ್ರದುರ್ಗಾ | 20889 | 17.02 | 592 | 0.48 |
| 12 | ದಕ್ಷಿಣ ಕನ್ನಡ | 6148 | 5.47 | 76 | 0.07 |
| 13 | ದಾವಣಗೆರೆ | 26389 | 18.16 | 468 | 0.32 |
| 14 | ಧಾರವಾಡ | 31851 | 24.59 | 1364 | 1.05 |
| 15 | ಗದಗ | 22174 | 28.38 | 758 | 0.97 |
| 16 | ಕಲಬುರಗಿ | 39538 | 19.28 | 1258 | 0.61 |
| 17 | ಯಾದಗಿರಿ | 32399 | 27.90 | 786 | 0.68 |
| 18 | ಹಾಸನ | 3440 | 4.09 | 159 | 0.19 |
| 19 | ಹಾವೇರಿ | 36640 | 24.22 | 920 | 0.61 |
| 20 | ಕೊಡಗು | 4332 | 13.04 | 123 | 0.37 |
| 21 | ಕೋಲಾರ | 12824 | 13.68 | 156 | 0.17 |
| 22 | ಕೊಪ್ಪಳ | 42471 | 31.88 | 1496 | 1.12 |
| 23 | ಮಂಡ್ಯ | 7341 | 7.42 | 159 | 0.16 |
| 24 | ಮೈಸೂರು | 19970 | 13.66 | 241 | 0.16 |
| 25 | ರಾಮನಗರ | 3990 | 6.66 | 118 | 0.20 |
| 26 | ರಾಯಚೂರು | 72734 | 32.51 | 1773 | 0.79 |
| 27 | ಶಿವಮೊಗ್ಗ | 12593 | 9.56 | 387 | 0.29 |
| 28 | ತುಮಕೂರು | 13619 | 9.38 | 322 | 0.22 |
| 29 | ಉಡುಪಿ | 3261 | 5.39 | 148 | 0.24 |
| 30 | ಉತ್ತರ ಕನ್ನಡ | 11883 | 11.81 | 391 | 0.39 |
| | ರಾಜ್ಯದ ಒಟ್ಟು | **756229** | **18.93** | **17123** | **0.43** |

**ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.1186ಕ್ಕೆ ಅನುಬಂಧ-2**

**ರಾಜ್ಯದಲ್ಲಿ 6 ತಿಂಗಳಿನಿಂದ 6 ವರ್ಷದ ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ಹೋಗಲಾಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿದೆ:**

1. ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಅಡಿ ಫಲಾನುಭವಿಗಳಿಗಾಗಿ ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ.

2. 6 ತಿಂಗಳಿನಿಂದ 6 ವರ್ಷದ ಮಕ್ಕಳಿಗೆ ಅಂಗನವಾಡಿ ಕೇಂದ್ರಗಳ ಮೂಲಕ ನೀಡುತ್ತಿರುವ ಪೂರಕ ಪೌಷ್ಟಿಕ ಆಹಾರದ ಜೊತೆಗೆ ಕ್ಷೀರಭಾಗ್ಯ ಯೋಜನೆಯಡಿ ವಾರದಲ್ಲಿ 5 ದಿನ ಕೆನೆಭರಿತ 150 ಎಂ.ಎಲ್. ಹಾಲನ್ನು ನೀಡಲಾಗುತ್ತಿದೆ. ತೀವ್ರ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 3 ದಿನ 200 ಎಂ.ಎಲ್. ಕೆನೆಭರಿತ ಹಾಲನ್ನು ಹಾಗೂ 3 ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ.

3. ಹಿಂದುಳಿದ 5 ಜಿಲ್ಲೆಗಳಾದ ಬೀದರ್, ಕಲ್ಬುರ್ಗಿ, ರಾಯಚೂರು, ಕೊಪ್ಪಳ ಹಾಗೂ ಯಾದಗಿರಿ ಜಿಲ್ಲೆಗಳ ಸಾಧಾರಣ ಅಪೌಷ್ಟಿಕತೆ ಇರುವ ಮಕ್ಕಳಿಗೆ ಪೂರಕ ಪೌಷ್ಟಿಕ ಆಹಾರದ ಜೊತೆಯಲ್ಲಿ ವಾರದಲ್ಲಿ 3 ದಿನ ಮೊಟ್ಟೆ ಹಾಗೂ 3 ದಿನ 200 ಎಂ.ಎಲ್. ಹಾಲು ನೀಡಲಾಗುತ್ತಿದೆ. ಹಾಗೂ ಈ ಜಿಲ್ಲೆಗಳಲ್ಲಿ ಮೊಟ್ಟೆ ತಿನ್ನದ ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 6 ದಿನ 200 ಎಂ.ಎಲ್. ಹಾಲು ನೀಡಲಾಗುತ್ತಿದೆ.

4. ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ ಯೋಜನೆಯಡಿ ತೀವ್ರ ಅಪೌಷ್ಟಿಕ ಮಕ್ಕಳಿಗೆ ಔಷಧ ಹಾಗೂ ಥೆರಪಿಟಿಕ್ ಆಹಾರಕ್ಕಾಗಿ ಪ್ರತಿ ಮಗುವಿಗೆ ರೂ.2000/-ರಂತೆ ವೈದ್ಯಕೀಯ ವೆಚ್ಚವನ್ನು ಇಲಾಖೆಯ ವತಿಯಿಂದ ನೀಡಲಾಗುತ್ತಿದೆ.